ಅಸಲು ದಾವಾ ಸಂಖ್ಯೆ . 247/2014

ಪಿ.ಡಬ್ಲ್ಯೂ-1

ದಿಃ 30-05-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿ ವಾದಿ ಪರ ವಕೀಲರಿಂದ ಃ-

ಕೊಟ್ರಪ್ಪ ಪ್ರಸ್ತುತ ತೀರಿಕೊಂಡಿದ್ದಾರೆಂದರೆ ಸರಿ . ದಿಃ 21-03-1989 ರಂದು ಹನುಮಂತಪ್ಪ ಬಿನ್ ದಾಸಪ್ಪ ರವರಿಂದ 2 ಎಕರೆ 30 ಗುಂಟೆ ಜಮೀನನ್ನು ನಾನು ಮತ್ತು ನನ್ನ ಅಣ್ಣ ಖರೀದಿ ಮಾಡಿದ್ದೇವೆಂದರೆ ಸರಿ . ದಿಃ 25-03-1980 ರಲ್ಲಿ ಗೋಣಪ್ಪನ ಹೆಂಡತಿ ಗಂಗಮ್ಮ ಸರ್ವೆ ನಂ 22/3 ಸಾಲಬಾಳು ಗ್ರಾಮದ 34 ಗುಂಟೆಯನ್ನು ಮರಿಗೌಡರಿಗೆ ಮಾರಾಟ ಮಾಡಿದ್ದಾರೆಂದು ಸೂಚಿಸಿದರೆ ಸುಳ್ಳು ಎಂದು ನುಡಿಯುತ್ತಾರೆ. ಸಾಲಬಾಳು ಗ್ರಾಮದ ಸರ್ವೆ ನಂ 22 ರಲ್ಲಿ 4 ಎಕರೆ, 30 ಗುಂಟೆ ಗೌಡಪ್ಪರ ಹಿಸ್ಸಾ ಜಮೀನು ಎಂದರೆ ಸರಿ. ನಿಪಿ

8 ಮತ್ತು 9 ರ ದಾಖಲೆಯಲ್ಲಿ ಸರ್ವೆ ನಂ 22/3 ರ ಸಂಬಂಧಿಸಿದ ನನ್ನ ಅಜ್ಜ ಗೊಣಪ್ಪನಿಗೆ ಸೇರಿದ್ದ ದಾಖಲೆಗಳೆಂದರೆ ಸರಿ . ನಿಪಿ 22 ರಿಂದ 28 ದಾಖಲೆಗಳು ಸರ್ವೆ ನಂ 23 ರ ಸಂಬಂಧಿಸಿದ ದಾಖಲೆಗಳೆಂದರೆ ಸರಿಯಲ್ಲ. ಅವುಗಳು ನನ್ನ ತಾಯಿಯ ಜೀವಾನಾಂಶಕ್ಕೆ ಬಂದಂತಹ 1 ಎಕರೆ 29 ಗುಂಟೆಗೆ ಸಂಬಂಧಿಸಿದ ಕಂದಾಯ ರಶೀದಿಗಳು ನಿಪಿ 30 ಮತ್ತು 31 ರಲ್ಲಿ ಉ-ಕ್ಕೆ ಕುಂಟ ಬಸ್ಸಪ್ಪನವರ ಜಮೀನು ಎಂದು ತೋರಿಸಿದ್ದು ಅದು ನಾವು ಸರ್ವೆ ನಂ 23 ರಲ್ಲಿ ಖರೀದಿಸಿದ್ದು ಎಂದರೆ ಸರಿ . ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಚಾರಗಳು ಗೊತ್ತಿರುತ್ತದೆ ಅದನ್ನು ನಾನೇ ಬರೆಸಿರುತ್ತೇನೆ. ಜಂಭಪ್ಪನಿಗೆ

ಮಾರಾಟ ಮಾಡಿರುವ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಕಿರುವುದಿಲ್ಲ. ಯಲ್ಲಪ್ಪನ ಹಿಸ್ಸೆಗೆ ಬಂದಂತಹ 3 ಎಕರೆ , 10 ಗುಂಟೆ ಜಮೀನನ್ನು ಯಲ್ಲಪ್ಪನ ಮಗ ದಾಸಪ್ಪ ಮಾರಾಟ ಮಾಡಿದ್ದಾರೆಂದರೆ, ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಾಯಿಗೆ 2 ಎಕರೆ 11 ಗುಂಟೆ ಬಂದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ನಾನು ಹಾಜರುಪಡಿಸಿದ್ದೇನೆ. ನನ್ನ ಅಜ್ಜ ನನ್ನ ತಾಯಿಗೆ ಸದರಿ ಜಮೀನು ಕೊಟ್ಟಿರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪ್ರತಿವಾದಿಗಳ ಮಧ್ಯೆ ಹಿಸ್ಸೆ ಆಗಿರುವ ಬಗ್ಗೆ ನಾನು ದಾಖಲೆಯನ್ನು ಹಾಜರುಪಡಿಸಿದ್ದೇನೆ. ಯಲ್ಲಪ್ಪನ ಸಂತತಿಯವರು 9 ಎಕರೆ ಜಮೀನಿನ ಪೈಕಿ 7 ಚಿಲ್ಲರೆ ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆಂದರೆ ಸಾಕ್ಷಿ ಯಲ್ಲಪ್ಪ ಮತ್ತು ಗೋಣಪ್ಪ ಮಾರಾಟ ಮಾಡಿದ್ದಾರೆಂದು ನುಡಿಯುತ್ತಾರೆ. ಉಳಿದ 2 ಎಕರೆ, 11 ಗುಂಟೆ ಜಮೀನು

ಯಲ್ಲಪ್ಪನ ಸಂತತಿಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿ ನನ್ನ ಅನುಭವದಲ್ಲಿಯೇ ಇದೆ ಎಂದು ನುಡಿಯುತ್ತಾರೆ. 1 ಎಕರೆ 29 ಗುಂಟೆ ಜಮೀನು ನಮ್ಮಂತೆ ಆಗುವಂತೆ ಪರಿಹಾರ ಕೇಳಿದ್ದೇನೆಂದು ನುಡಿಯುತ್ತಾರೆ. ಯಲ್ಲಪ್ಪನ ಸಂತತಿಯವರು 2 ಎಕರೆ 11 ಗುಂಟೆ ಜಮೀನನ್ನು ಸ್ವಾಧೀನದಲ್ಲಿದ್ದಾರೆಂದರೆ ನಾನು ಯಾವುದೇ ಸ್ವಾಧೀನದಲ್ಲಿಲ್ಲ ಎಂದು ಸೂಚಿಸಿದರೆ ಸುಳ್ಳು ಎಂದು ನುಡಿಯುತ್ತಾರೆ. ದಾವ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದು ಸೂಚಿಸಿದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.